102603

No. of Printed Pages : **15**

# GS-469

## VI Semester B.Com. Examination, May/June 2019

### COMMERCE

### 6.5 Elective Paper-III : Business Taxation

### (CBCS) (Fresh+Repeaters) (2017-18 & onwards)

Time : 3 Hours | Max. Marks : 70

***Instructions :*** *(1) Answers should be written completely either in Kannada or in English.*
*(2) **All** questions are to be answered by the repeaters whose register numbers starts with **15** only*

ವಿಭಾಗ – ಎ / **SECTION - A**

1. **ಯಾವುದಾದರೂ** ಐದು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ **ಎರಡು** ಅಂಕಗಳು. **5x2=10**

Answer **any five** sub-questions. Each sub-question carries **two** marks.

(a) ಆಸ್ತಿಗಳ ಗುಂಪು ಎಂದರೇನು ?

What do you mean by a block of assets ?

(b) ನಿವಾಸಿ ಕಂಪನಿ ಎಂದರೇನು ?

What is Resident Company ?

(c) CBEC ಮತ್ತು BCD ಪದಗಳನ್ನು ವಿಸ್ತರಿಸಿ.

Expand the terms CBEC and BCD.

(d) ಸ್ವಯಂ ಮೌಲ್ಯಮಾಪನ ಎಂದರೇನು ?

**ಅಥವಾ**

ಅಂತರ ರಾಜ್ಯ ಮಾರಾಟ ಎಂದರೇನು ?

What do you mean by self assessment ?

**OR**

what do you mean by inter-state sales ?

(e) ಕಾರ್ಯನಿರ್ವಹಿಸುವ ಪಾಲುದಾರ ಎಂದರೆ ಯಾರು ?

Who is working partner ?

(f) ಆಮದು ಸುಂಕ ಎಂದರೇನು ?

What is custom duty ?

(g) ಒಂದು ಪಾಲುದಾರಿಕೆ ಸಂಸ್ಥೆಯ ಆದಾಯವನ್ನು ಕಂಡುಹಿಡಿಯುವಾಗ ಪಾಲುದಾರರ ಬಂಡವಾಳದ ಮೇಲಿನ ಬಡ್ಡಿಯನ್ನು ಯಾವ ರೀತಿ ಪರಿಗಣಿಸಲಾಗುವುದು ?

How do you treat interest payable to partners, capital during assessment of firms ?

## ವಿಭಾಗ – ಬಿ / SECTION - B

**ಯಾವುದಾದರೂ ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು. **3x6=18**

Answer **any three** questions. Each question carries **six** marks.

**2.** ವೀರೇಶ್ ಮತ್ತು ಕಂಪನಿಯ ಬಳಿ ಒಂದು ಯಂತ್ರದ ಗುಂಪು ಇದ್ದು, ದಿನಾಂಕ 1-4-2017 ರಂದು ಅದರ WDV ಮೌಲ್ಯವು ₹ 50,00,000 ಇರುತ್ತದೆ. ಪ್ರಸಕ್ತ ವರ್ಷದಲ್ಲಿ ದಿನಾಂಕ 5-9-2017 ರಂದು ₹ 20,00,000 ಮೌಲ್ಯದ ಇನ್ನೊಂದು ಯಂತ್ರವನ್ನು ಕಂಪನಿಯವರು ಖರೀದಿಸಿದ್ದಾರೆ.

ದಿನಾಂಕ 2-11-2017 ರಂದು ಕಂಪನಿಯ ಆವರಣದಲ್ಲಿ ಬೆಂಕಿ ಅಪಘಾತ ಸಂಭವಿಸಿದ್ದು, ಯಂತ್ರವು ಗಣನೀಯ ಪ್ರಮಾಣದಲ್ಲಿ ಹಾನಿಗೊಳಗಾಗಿದೆ. ವಿಮಾ ಕಂಪನಿಯು, ವಿಮಾ ಪರಿಹಾರವಾಗಿ ₹ 25,00,000 ಮೊತ್ತವನ್ನು ನೀಡಿರುತ್ತದೆ. ಯಂತ್ರದ ಸವಕಳಿ ದರ 10% ರಷ್ಟಿದೆ.

ದಿನಾಂಕ 31-3-2018 ಕ್ಕೆ ಕೊನೆಗೊಳ್ಳುವ ವರ್ಷದ ಲಾಭ–ನಷ್ಟ ಖಾತೆಯಲ್ಲಿ ತೋರಿಸಬಹುದಾದ ಸವಕಳಿಯ ಮೊತ್ತವನ್ನು ಕಂಡುಹಿಡಿಯಿರಿ.

ಒಂದು ವೇಳೆ ಯಂತ್ರಗಳ ಗುಂಪು ಬೆಂಕಿ ಅಪಘಾತದಲ್ಲಿ ಸಂಪೂರ್ಣ ನಾಶವಾಗಿದ್ದರೆ ಆಗುವ ವ್ಯತ್ಯಾಸವನ್ನು ಲೆಕ್ಕಾಚಾರ ಮಾಡಿ. ಲೆಕ್ಕಾಚಾರ ಮಾಡುವಾಗ ವಿಮಾ ಪರಿಹಾರವನ್ನು ₹ 25,00,000 ಎಂದೇ ಊಹಿಸಿ.

Veeresh and Co. had a block of plant and machinery having WDV of ₹ 50,00,000 as on 1-4-2017. During the year an additional machinery costing ₹ 20,00,000 was purchased on 5-9-2017.

On 2-11-2017 fire had broken in the premises of the company destroying a considerable part of the old plant and machinery. Insurance company paid the damages of ₹ 25,00,000. The rate of depreciation applicable is 10%.

Calculate the amount of depreciation chargeable to P and L a/c for the year ended 31-3-2018.

Will it make any difference if the entire block of plant and machinery is destroyed by fire ? Show the calculations assuming that the claim amount ₹ 25,00,000 remain same.

3. P, Q ಮತ್ತು R ಇವರು ಒಂದು ಪಾಲುದಾರಿಕೆ ಸಂಸ್ಥೆಯಲ್ಲಿ ಪಾಲುದಾರರಾಗಿದ್ದು, ವ್ಯವಹಾರದಿಂದ ಬರುವ ಲಾಭ–ನಷ್ಟವನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದಾರೆ. 31-3-2018 ಕ್ಕೆ ಕೊನೆಗೊಳ್ಳುವ ವರ್ಷಕ್ಕೆ, ಈ ಕೆಳಗಿನ ವೆಚ್ಚಗಳನ್ನು ಕಳೆದು, ಸಂಸ್ಥೆಯು ₹ 5,00,000 ನಿವ್ವಳ ಲಾಭ ಮಾಡಿರುತ್ತದೆ.

(i) Q ಗೆ ನೀಡಿದ ವೇತನ – ₹ 50,000

(ii) P ಗೆ ನೀಡಿದ ಕಮಿಷನ್ – ₹ 20,000

(iii) R ಗೆ ನೀಡಿದ ಬೋನಸ್ – ₹ 10,000

(iv) ರಾಷ್ಟ್ರೀಯ ರಕ್ಷಣಾ ನಿಧಿಗೆ ದೇಣಿಗೆ – ₹ 30,000

ಮೇಲಿನ ₹ 5,00,000 ನಿವ್ವಳ ಲಾಭವು ₹ 20,000 ಸರಕಾರಿ ಭದ್ರತಾ ಹೂಡಿಕೆಗಳ ಮೇಲಿನ ಬಡ್ಡಿ ಹಾಗೂ ₹ 10,000 ಭಾರತದ ಕಂಪನಿಯ ಲಾಭಾಂಶವನ್ನು ಒಳಗೊಂಡಿದೆ. ಈ ಎಲ್ಲಾ ಮಾಹಿತಿಯಿಂದ 2017-18 ಸಾಲಿಗೆ ಪಾಲುದಾರರಿಗೆ ನೀಡಬೇಕಾದ ಸಂಭಾವನೆ ಮತ್ತು ಸಂಸ್ಥೆಯ ವ್ಯಾಪಾರಿ ಲಾಭವನ್ನು ಕಂಡುಹಿಡಿಯಿರಿ.

P, Q and R are the partners in a firm sharing profits and losses equally. For the year ended 31-3-2018, The firms net profit is ₹ 5,00,000 after debiting the following :

(i) Salary to Q - ₹ 50,000

(ii) Commission to P - ₹ 20,000

(iii) Bonus to R - ₹ 10,000

(iv) Donation to NDF - ₹ 30,000

The above net profit ₹ 5,00,000 also includes ₹ 20,000 interest on govt. securities and ₹ 10,000 devidend from Indian Company.

Compute the remuneration payable to partners and firm's business income for the year 2017-18.

4. ಆದಾಯ ತೆರಿಗೆಯ ಕಾಯ್ದೆಯ ಪ್ರಕಾರ ವ್ಯವಹಾರದಿಂದ ಬರುವ ಆದಾಯವನ್ನು ಕಂಡುಹಿಡಿಯುವಾಗ ಈ ಕೆಳಗಿನ ಪಾವತಿಗಳು ಸಮ್ಮತಿ ಅಥವಾ ಅಸಮ್ಮತಿ ಖರ್ಚುಗಳೇ ಎಂಬುದನ್ನು ತಿಳಿಸಿ.
   (i) ಸಿಬ್ಬಂದಿ ಕಳ್ಳತನದಿಂದ ಕಳೆದು ಹೋದ ದಾಸ್ತಾನು
   (ii) ಸೇವಾ ವೆಚ್ಚಗಳು
   (iii) ದತ್ತಿ ದೇಣಿಗೆ ಪಾವತಿ
   (iv) ಸಂಶಯಾತ್ಮಕ ಸಾಲಕ್ಕೆ ಮುನ್ನೇರ್ಪಾಡು
   (v) ಪ್ರಸ್ತುತ ಇರುವ ಬಂಡವಾಳ ಆಸ್ತಿಯ ಶೀರ್ಷಿಕೆಯನ್ನು ಉಳಿಸಿಕೊಳ್ಳಲು ಮಾಡಿರುವ ಕಾನೂನು ಬದ್ಧ ಖರ್ಚುಗಳು
   (vi) ಬಂಡವಾಳ ಆಸ್ತಿಯ ಮಾರಾಟದಿಂದಾದ ನಷ್ಟ

   State whether the following payments are admissible or not while calculating the business income under the provisions of Income Tax Act.
   (i) Loss of stock due to theft by an employee
   (ii) Service charges
   (iii) Charities paid
   (iv) Provisions for doubtful debt
   (v) Legal expenses to defend on existing title to a capital asset
   (vi) Loss on sale of capital asset

5. ಈ ಕೆಳಗಿನ ವಿವರಗಳಿಂದ ತೆರಿಗೆಗೊಳಪಡಿಸಬಹುದಾದ ಮೌಲ್ಯವನ್ನು ಕಂಡುಹಿಡಿಯಿರಿ :
   (i) ಯಂತ್ರದ FOB ಮೌಲ್ಯ 32,000 UK ಪೌಂಡುಗಳು
   (ii) ಇಂಜಿನೀಯರಿಂಗ್ ಮತ್ತು ವಿನ್ಯಾಸದ ವೆಚ್ಚಗಳು 12,000 UK ಪೌಂಡುಗಳು
   (iii) ವಿಮಾನಯಾನ ಸಾಗಾಣಿಕಾ ವೆಚ್ಚ – 6,000 UK ಪೌಂಡುಗಳು
   (iv) ವಿಮೆ ವೆಚ್ಚ–ಮಾಹಿತಿ ಇರುವುದಿಲ್ಲ
   (v) ಸ್ಥಳೀಯ ಏಜೆಂಟ್‌ಗೆ ಭಾರತದ ರೂಪಾಯಿಗಳಲ್ಲಿ ನೀಡಬೇಕಾದ ದಲ್ಲಾಳಿ @ 2% ರಷ್ಟು–ಯಂತ್ರದ FOB ಮೌಲ್ಯದ ಮೇಲೆ
   (vi) ಕೇಂದ್ರ ಸರಕಾರವು ಘೋಷಿಸಿರುವ ವಿನಿಮಯ ಮೌಲ್ಯ ಪ್ರತಿ 1 UK ಪೌಂಡಿಗೆ 68 ರೂಪಾಯಿಗಳು

   From the following information, compute the assessable value :
   (i) Value of machine in UK pounds 32,000. FOB
   (ii) Engineering and design charges paid - UK pounds 12,000
   (iii) Freight paid (Air) - UK pounds 6,000
   (iv) Insurance - Not known
   (v) Commission payable to local agent @ 2% of FOB in Indian Rupees.
   (vi) The exchange rate announced by the Central Government is ₹ 68 per UK pound.

6. ಇ–ಫೈಲಿಂಗ್ ಎಂದರೇನು ? ಇ–ಫೈಲಿಂಗ್‌ನಿಂದ ಆಗುವ ಅನುಕೂಲಗಳು ಯಾವುವು ?

ಅಥವಾ

ಹಣಕಾಸಿನ ವರ್ಷ 2017-18 ಕ್ಕೆ ಸಂಬಂಧಪಟ್ಟಂತೆ Mr. ತನುಷ್‌ನ ಬೆಂಗಳೂರಿನಿಂದ ಕೋಲ್ಕತ್ತಾಕೆ ಮಾರಾಟದ ಸಂಬಂಧಪಟ್ಟಂತೆ, ಈ ಕೆಳಗಿನ ವಿವರಗಳಿಂದ ಕೇಂದ್ರ ಮಾರಾಟ ತೆರಿಗೆಯನ್ನು ನಿರ್ಧರಿಸಿರಿ.

(i) ಮಾರಾಟ ಬೆಲೆ ₹ 30,00,000

(ii) ಕೇಂದ್ರ ಮಾರಾಟ ತೆರಿಗೆ – 22%

(iii) ವ್ಯಾಪಾರೀ ರಿಯಾಯಿತಿ – 8%

(iv) ನಗದು ರಿಯಾಯಿತಿ – 2%

(v) ಸರಬರಾಜು ಮಾಡಿದ ಪ್ರಮಾಣ – 10,000 ಕಿ.ಗ್ರಾಂ

(vi) ವಿತರಣೆಯಾದ ಒಂದು ವಾರದೊಳಗೆ ಕೊಳ್ಳಿದವನು ತಿರಸ್ಕರಿಸಿದ ಪ್ರಮಾಣ – 1,000 ಕಿ.ಗ್ರಾಂ

(vii) ರವಾನೆಯಾದ ಆರು ತಿಂಗಳಿನ ನಂತರ ಕೊಳ್ಳಿದವನು ವಾಪಸ್ಸು ಮಾಡಿದ ಪ್ರಮಾಣ – 2,000 ಕಿ.ಗ್ರಾಂ

(viii) ಸರಕು ಪಟ್ಟಿಯ ಸಂಖ್ಯೆ : 0555 ದಿನಾಂಕ 14.6.2017

What is e-filing ? What are the benefits associated with e-filing ?

**OR**

Determine the CST for the financial year 2017-18 from the following information of Mr. Tanush when the sale is effected from Bengaluru to Kolkatta.

(i) Sales price ₹ 30,00,000

(ii) CST - 22%

(iii) Trade discount - 8%

(iv) Cash discount - 2%

(v) Quantity Supplied - 10,000 kgs

(vi) Quantity rejected by the buyer within a week after delivery - 1,000 kgs

(vii) Quantity returned by the buyer after 6 months of dispatch - 2,000 kgs

(viii) Invoice number : 0555 dated 14.6.2017

## ವಿಭಾಗ – ಸಿ /SECTION – C

**ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು.** **3x14=42**

Answer **any three** questions. Each question carries **fourteen** marks.

7. ತೆರಿಗೆ ನಿರ್ಧಾರಣಾ ವರ್ಷ 2018-19 ಕ್ಕೆ ಸಂಬಂಧಿಸಿದಂತೆ ತನುಷ್ ಮತ್ತು ಕಂಪನಿಯ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

| ವಿವರಗಳು | ಮೊತ್ತ ₹ | ವಿವರಗಳು | ಮೊತ್ತ ₹ |
|---|---|---|---|
| ಗೆ ವಸ್ತುಗಳ ತಯಾರಿಕೆಯ ಮಾರಾಟ ಮಾಡಿದ ಸರಕುಗಳ ವೆಚ್ಚ | 10,00,000 | ಇಂದ ಮಾರಾಟಗಳು | 14,00,000 |
| ಗೆ ದೀರ್ಘಕಾಲಿನ ಬಂಡವಾಳ ಲಾಭದ ಮೇಲಿನ ತೆರಿಗೆ | 3,000 | ಇಂದ ದೀರ್ಘಕಾಲಿಕ ಬಂಡವಾಳ ಲಾಭ (ಪರಿಚ್ಛೇದ 10(38) ರನ್ವಯ ಆದಾಯ ತೆರಿಗೆ ವಿನಾಯತಿ ಇದೆ) | 1,50,000 |
| ಗೆ ಸವಕಳಿ | 85,000 | ಇಂದ ಸರಕಾರಿ ಭದ್ರತಾ ಹೂಡಿಕೆಗಳ ಮೇಲಿನ ಬಡ್ಡಿ | 15,000 |
| ಗೆ ಪ್ರಸ್ತಾಪಿಸಲಾದ ಲಾಭಾಂಶ ಹಂಚಿಕೆ | 1,30,000 | | |
| ಗೆ ಆದಾಯ ತೆರಿಗೆ | 60,000 | | |
| ಗೆ ನಿವ್ವಳ ಲಾಭ | 2,87,000 | | |
| | 15,65,000 | | 15,65,000 |

**ಇತರೆ ಮಾಹಿತಿ :**

1. ಆದಾಯ ತೆರಿಗೆ ಕಾಯ್ದೆಯನ್ವಯ ಕಳೆಯಬಹುದಾದ ಸವಕಳಿ ಮೊತ್ತ ₹ 50,000
2. ಹಿಂದಿನ ವರ್ಷದಿಂದ ಪುಸ್ತಕದ ಪ್ರಕಾರ ತಂದ ವ್ಯವಹಾರ ನಷ್ಟದ ಮೊತ್ತ ₹ 1,25,000
3. ಹಿಂದಿನ ವರ್ಷದಿಂದ ಆದಾಯ ತೆರಿಗೆಯ ಪ್ರಕಾರ ತಂದು ಹೊಂದಿಸಲಾಗದ ಸವಕಳಿಯ ಮೊತ್ತ ₹ 55,000

**ಈ ಎಲ್ಲಾ ಮಾಹಿತಿಗಳಿಂದ :**

(i) ಸಾಮಾನ್ಯ ನಿಯಮಗಳಡಿಯಲ್ಲಿ ಕಂಪನಿಯ ಒಟ್ಟು ಆದಾಯವನ್ನು

(ii) ಕಂಪನಿಯು ಪಾವತಿಸಬೇಕಾದ ಆದಾಯ ತೆರಿಗೆಯ ಹೊಣೆಗಾರಿಕೆಯ ಮೊತ್ತ ಹಾಗೂ

(iii) ಆದಾಯ ತೆರಿಗೆ ಕಾಯ್ದೆಯ ಪರಿಛೇದ 115-JB ಪ್ರಕಾರ ಪಾವತಿಸಬೇಕಾದ ತೆರಿಗೆಯನ್ನು ಕಂಡುಹಿಡಿಯಿರಿ.

The following is the informartion of Tanush and Co. for the A.Y. 2018-19.

| Particulars | Amount ₹ | Particulars | Amount ₹ |
|---|---|---|---|
| To Cost of goods sold | 10,00,000 | By Sales | 14,00,000 |
| To Tax relating to LTCG | 3,000 | By Longterm Capital gain | 1,50,000 |
| To Depreciation | 85,000 | (Exempt u/s 10(38)) | |
| To Proposed dividend | 1,30,000 | By Int. on govt securities | 15,000 |
| To Income Tax | 60,000 | | |
| To Net profit | 2,87,000 | | |
| | 15,65,000 | | 15,65,000 |

**Additional Information :**

1. Depreciation allowable for the year as per income tax Act is ₹ 50,000

2. Brought forwarded business loss as per books of accounts is ₹ 1,25,000

3. Brought forwarded unabsorbed depreciation is ₹ 55,000

**Compute :**

(i) Total Income of the company under normal provisions

(ii) Tax liability of the company

(iii) Tax payable U/S 115-JB

8. Mr. ಭರತ್‌ನು ಅಮೇರಿಕಾದಿಂದ ವಿಮಾನದ ಮೂಲಕ US $ 1,20,000 (FOB) ಬೆಲೆಬಾಳುವ ಒಂದು ಯಂತ್ರ ಹಾಗೂ ಅದಕ್ಕೆ ಅವಶ್ಯವಿರುವ ಬಿಡಿಭಾಗಗಳನ್ನು ಆಮದು ಮಾಡಿಕೊಳ್ಳುತ್ತಾನೆ. ಇದರ ಇತರ ವಿವರಗಳು ಈ ಕೆಳಕಂಡಂತಿವೆ.

(a) ಭಾರತದಲ್ಲಿನ ಸ್ಥಳೀಯ ಪ್ರತಿನಿಧಿಯ ದಲ್ಲಾಳಿ ವೆಚ್ಚಗಳು ₹ 27,000

(b) ವಿಮಾನ ನಿಲ್ದಾಣದಿಂದ ಕಾರ್ಖಾನೆಯ ದಾಸ್ತಾನು ಮಳಿಗೆಯವರೆಗಿನ ಸಾರಿಗೆ ಮತ್ತು ವಿಮಾ ವೆಚ್ಚ ₹ 30,000

(c) ಸಾಗಾಣಿಕೆ ವೆಚ್ಚ US $ 36,000 (ಅಮೇರಿಕಾದಿಂದ ಭಾರತಕ್ಕೆ)

(d) ಸರಕುಗಳ ವಿಮೆ ಮಾಡಿದೆ, ವಿಕ್ರಯ ಪಟ್ಟಿಯಲ್ಲಿ ವಿಮಾ ಹಣ ತೋರಿಸಿಲ್ಲ ಹಾಗೂ ಲಭ್ಯವಿಲ್ಲ.

(e) Mr. ಭರತ್‌ನ ವಿನಂತಿಯಂತೆ ಅಮೇರಿಕದಲ್ಲಿ ಯಂತ್ರದ ರೂಪು ರಚನೆ ಸುಧಾರಿಸಲು $ 6,000 ಖರ್ಚು ಮಾಡಿದೆ. ಆದರೆ ಇದನ್ನು ವಿಕ್ರಯ ಪಟ್ಟಿಯಲ್ಲಿ ಪ್ರತಿಫಲಿಸಿಲ್ಲ

(f) ಮೂಲ ಆಮದು ಸುಂಕ – 15%, ಶಿಕ್ಷಣ ಸುಂಕ – 3% ಹಾಗೂ IGST -18%

(g) ಪರಿಗಣಿಸಬೇಕಾದ ವಿನಿಮಯ ದರ – ಅಮೇರಿಕಾದ $ ಒಂದಕ್ಕೆ ₹ 72 ರಂತೆ

**ಲೆಕ್ಕ ಮಾಡಬೇಕಾಗಿರುವುದು :**

(i) ತೆರಿಗೆಗೊಳಪಡಿಸಬಹುದಾದ ಮೌಲ್ಯ

(ii) ಒಟ್ಟು ತೆರಬೇಕಾದ ಆಮದು ಸುಂಕ

Mr. Bharath imports by air from USA a machine along with relevant accessories and spares for the value US $ 1,20,000 FOB. The other details are as follows :

(a) Commission to local agent in India ₹ 27,000

(b) Freight and Isnsurance from airport to factory godown ₹ 30,000

(c) Freight - US $ 36,000 (US to India)

(d) Goods are insured, premium amount is not shown in invoice and not available

(e) At the request of Mr. Bharath, US $ 6,000 has been incurred as expenses for improving the design of the machine, but the same is not reflected in the invoice.

(f) Basic custom duty is 15% education cess - 3% and IGST - 18%

(g) Exchange rate to be considered US $ 1 = ₹ 72

**Compute :**

(i) Assessable Value

(ii) Total custom duty payable

9. A, B ಮತ್ತು C ಪಾಲುದಾರರು ಒಂದು ಸಂಸ್ಥೆಯ ಲಾಭ ಮತ್ತು ನಷ್ಟಗಳನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದಾರೆ. ಪ್ರಸಕ್ತ 2017-18 ನೇ ವರ್ಷದಲ್ಲಿ. ಈ ಕೆಳಕಾಣಿಸಿದವುಗಳನ್ನು ಸಂಸ್ಥೆಯ ಆದಾಯದಲ್ಲಿ ಕಳೆದ ನಂತರ, ಸಂಸ್ಥೆಗೆ ₹ 6,00,000 ನಷ್ಟವಾಗಿದೆ.

(a) A ಗೆ ನೀಡಲಾದ ಕಮಿಷನ್‌ನ ಮೊತ್ತ ₹ 40,000

(b) B ಮತ್ತು C ಗೆ ನೀಡಲಾದ ಬೋನಸ್ ತಲಾ ₹ 80,000

(c) A, B ಮತ್ತು C ಗೆ ನೀಡಲಾದ ಸಂಬಳ ತಲಾ ₹ 1,60,000

(d) ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಗೆ ದೇಣಿಗೆ ₹ 80,000

(e) ಆದಾಯ ತೆರಿಗೆ ₹ 40,000

(f) ಮಾರಾಟ ತೆರಿಗೆ ₹ 1,00,000

(g) ಕಛೇರಿ ಬಾಡಿಗೆ ₹ 1,00,000

(h) ಆಸ್ತಿಗಳ ಮೇಲಿನ ಸವಕಳಿ ₹ 4,00,000 (ಆದಾಯ ತೆರಿಗೆ ಕಾನೂನಿನನ್ವಯ ಕಳೆಯಬಹುದಾದ ಸವಕಳಿಯ ಮೊತ್ತ ₹ 4,80,000)

(i) ಪಾಲುದಾರರ ಬಂಡವಾಳದ ಮೇಲಿನ ಬಡ್ಡಿ, ವಾರ್ಷಿಕ 20% ರಂತೆ

A - ₹ 64,000

B - ₹ 56,000

C - ₹ 72,000

ಅಲ್ಲದೆ, ಈ ಕೆಳಕಂಡ ಆದಾಯಗಳನ್ನು ಕೂಡಾ ಪ್ರಸಕ್ತ ವರ್ಷದ – ಲಾಭ ನಷ್ಟದ ಖಾತೆಯಲ್ಲಿ ತೋರಿಸಲಾಗಿದೆ.

(i) ದೀರ್ಘಕಾಲೀಕ ಬಂಡವಾಳ ಲಾಭ ₹ 90,000

(ii) ಅಲ್ಪಕಾಲೀಕ ಬಂಡವಾಳ ಲಾಭ ₹ 70,000

(iii) ರಫ್ತಿನಿಂದ ಗಳಿಸಿದ ಆದಾಯ ₹ 3,80,000

ಈ ಎಲ್ಲಾ ವಿವರಗಳಿಂದ ಸಂಸ್ಥೆಯ ಆದಾಯ ತೆರಿಗೆಗೊಳಪಡಿಸಬಹುದಾದ ಲಾಭ ಮತ್ತು ಪುಸ್ತಕ ಲಾಭದ ಮೊತ್ತವನ್ನು ತೆರಿಗೆ ವರ್ಷ 2018-19 ಕ್ಕೆ ಕಂಡುಹಿಡಿಯಿರಿ.

A, B and C are the partners sharing profits and losses equally in a firm. During the year 2017-18 the firm incurs a net loss of ₹ 6,00,000 after deducting the following :

(a) Commission to A ₹ 40,000

(b) Bonus to B and C ₹ 80,000 each

(c) Salary to A, B and C ₹ 1,60,000 each

(d) Donation to PM's National Relief Fund ₹ 80,000

(e) Income Tax ₹ 40,000

(f) Sales Tax ₹ 1,00,000

(g) Office rent ₹ 1,00,000

(h) Depreciation on assets ₹ 4,00,000 (Allowable depreciation as per IT Law is ₹ 4,80,000)

(i) Interest on Capital Calculated at 20%

A - ₹ 64,000

B - ₹ 56,000

C - ₹ 72,000

The profit and loss a/c also included the following incomes

(i) Long term Capital gain ₹ 90,000

(ii) Short term Capital gain ₹ 70,000

(iii) Export earnings ₹ 3,80,000

Compute the book profit of the firm and its taxable Income for the A.Y. 2018-19.

**10.** P.Y. 2017-18 ಕ್ಕೆ ಸಂಬಂಧಪಟ್ಟಂತೆ ಸಂದೇಶ್ ಕಂಪನಿ ಲಿಮಿಟೆಡ್‌ನ ಲಾಭ–ನಷ್ಟ ಖಾತೆಯು ಈ ಕೆಳಕಂಡಂತಿದೆ :

| | | | |
|---|---|---|---|
| ಗೆ ಸ್ಥಾಪನಾ ವೆಚ್ಚಗಳು | 2,50,000 | ಇಂದ ಸ್ಥೂಲ ಲಾಭ | 12,00,000 |
| ಗೆ ಬಾಡಿಗೆ ಮತ್ತು ತೆರಿಗೆಗಳು | 27,500 | ಇಂದ ಬಾಡಿಗೆ ಪಡೆದದ್ದು | 80,000 |
| ಗೆ ಸವಕಳಿ | 60,000 | ಇಂದ ಸ್ಥಿರಾಸ್ತಿ ಮಾರಾಟದಿಂದ ಲಾಭ | 37,000 |
| ಗೆ ಬೆಂಕಿ ವಿಮೆ | 17,000 | ಇಂದ ಸರಕಾರಿ ಭದ್ರತಾ ಹೂಡಿಕೆಗಳ ಮೇಲಿನ ಬಡ್ಡಿ | 24,000 |
| ಗೆ ತೆರಿಗೆ ಮುನ್ನೇರ್ಪಾಡು | 3,10,000 | ಇಂದ ಭಾರತ ದೇಶೀಯ ಕಂಪನಿಯಿಂದ ಬಂದ ಲಾಭಾಂಶ | 20,000 |
| ಗೆ ಮನೋರಂಜನಾ ವೆಚ್ಚ | 14,400 | | |
| ಗೆ ರಾಜೀವಗಾಂಧಿ ಫೌಂಡೇಷನ್‌ಗೆ ದೇಣಿಗೆ | 10,000 | | |
| ಗೆ ಸಾಮಾನ್ಯ ವೆಚ್ಚಗಳು | 65,500 | | |
| ಗೆ ಪ್ರಸ್ತಾಪಿಸಲಾದ ಲಾಭಾಂಶ | 10,500 | | |
| ಗೆ ನಿವ್ವಳ ಲಾಭ | 5,96,100 | | |
| | 13,61,000 | | 13,61,000 |

**ಹೆಚ್ಚಿನ ಮಾಹಿತಿ :**

1. ಸಾಮಾನ್ಯ ವೆಚ್ಚಗಳಲ್ಲಿ, ಮನೆ ಆಸ್ತಿ ಬಾಡಿಗೆಗೆ ನೀಡಿದ್ದಕ್ಕೆ ಸಂಬಂಧಪಟ್ಟಂತೆ ₹ 9,600 ಮುನಿಸಿಪಾಲಿಟಿ ಕರ ಮತ್ತು ₹ 1,600 ವಿಮೆ ವೆಚ್ಚಗಳು ಸೇರಿಕೊಂಡಿವೆ.

2. ಆದಾಯ ಕರ ನಿಯಮಾವಳಿಗಳಂತೆ ಕಳೆಯಬಹುದಾದ ಸವಕಳಿ ₹ 50,000

ಮೇಲಿನ ಮಾಹಿತಿಗಳಿಂದ A.Y. 2018-19 ಕ್ಕೆ ಸಂಬಂಧಪಟ್ಟಂತೆ ಒಟ್ಟು ಆದಾಯವನ್ನು ಕಂಡುಹಿಡಿಯಿರಿ.

Following is the Profit and Loss a/c of Sandesh and Company Limited for the P.Y. 2017-18 :

| | | | |
|---|---|---|---|
| To Establishment exp | 2,50,000 | By G.P | 12,00,000 |
| To Rent and taxes | 27,500 | By Rent received (HP) | 80,000 |
| To Depreciation | 60,000 | By Profit on sale of fixed asset | 37,000 |
| To Fire Insurance | 17,000 | By Int on govt. securities | 24,000 |
| To Provision for Tax | 3,10,000 | By Dividend received from Indian Company | 20,000 |
| To Entertainment expenses | 14,400 | | |
| To Donation to Rajiv Gandhi Foundation | 10,000 | | |
| To General expenses | 65,500 | | |
| To Proposed dividend | 10,500 | | |
| To Net Profit | 5,96,100 | | |
| | 13,61,000 | | 13,61,000 |

**Additional Information :**

1. General expenses include a sum of ₹ 9,600. Municipal tax and ₹ 1,600 insurance on house property let-out.

2. Depreciation admissible as per IT law is ₹ 50,000

Compute the total income of the company for the A.Y. 2018-19.

11. (a) ಡಿಜಿಟಲ್ ಸಹಿಯ ಪ್ರಯೋಜನಗಳನ್ನು ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

(b) XYZ ಕಂಪನಿ ಲಿಮಿಟೆಡ್‌ಗೆ P.Y. 2017-18 ಕ್ಕೆ ಸಂಬಂಧಿಸಿದಂತೆ ಒಟ್ಟು ತೆರಿಗೆ ಹೊಣೆಗಾರಿಕೆ ₹ 1,50,000 ಇದೆ.

(i) ಮೇಲಿನ ಮೊತ್ತಕ್ಕೆ ಮುಂಗಡ ತೆರಿಗೆ ಪಾವತಿಸಲು ಬಾಕಿ ಆಗುವ ದಿನಾಂಕಗಳು ಯಾವುವು ?

(ii) ಪ್ರತಿ ಬಾಕಿ ಆಗುವ ದಿನಾಂಕದಂದು ಪಾವತಿಸಬೇಕಾದ ಮುಂಗಡ ತೆರಿಗೆ ಎಷ್ಟು ?

(c) PQR ಕಂಪನಿಯು P. Y. 2017-18 ಸಾಲಿನಲ್ಲಿ ಈ ಕೆಳಗಿನಂತೆ ಪಾವತಿಗಳನ್ನು ಮಾಡಿದೆ. ಸದರಿ ಪಾವತಿಗಳನ್ನು ಮಾಡುವಾಗ TDS ಮಾಡಬೇಕಾದ ಮೊತ್ತವನ್ನು ಕಂಡುಹಿಡಿಯಿರಿ. ಕೆಳಗಿನ ಎಲ್ಲಾ ಸ್ವೀಕೃತಿದಾರರು (Mr. A ನ್ನು ಹೊರತು ಪಡಿಸಿ) ಅಧಿಕೃತ PAN ಕಾರ್ಡನ್ನು ಹೊಂದಿದ್ದು ನಾಲ್ಕು ಸ್ವೀಕೃತಿದಾರರೂ ನಿವಾಸಿ ಭಾರತೀಯರಾಗಿರುತ್ತಾರೆ.

(i) ತಿಂಗಳಿಗೆ ₹ 40,000 ರಂತೆ Mr. A ಗೆ ಬಾಡಿಗೆ ನೀಡಲಾಗಿದೆ.

(ii) ಶಾಸನಬದ್ಧ ಲೆಕ್ಕಪರಿಶೋಧಕನಿಗೆ ಸದರಿ ವರ್ಷಕ್ಕೆ ₹ 2,00,000 ಲೆಕ್ಕಪರಿಶೋಧನಾ ಶುಲ್ಕ ನೀಡಲಾಗಿದೆ.

(iii) XYZ ಕಂಪನಿ ಲಿಮಿಟೆಡ್‌ಗೆ ನೀಡಲಾದ ದಲ್ಲಾಳಿ ₹ 1,20,000

(iv) Mr. ರಮೇಶನಿಗೆ ಒಂದು ಕಾರ್ಯಕ್ರಮವನ್ನು ಕಾರ‍್ಯರೂಪಕ್ಕೆ ತರಲು ನೀಡಿದ. ಹಣ ₹ 1,00,000

ಅಥವಾ

ಕೇಂದ್ರ ಮಾರಾಟ ತೆರಿಗೆ ಎಂದರೇನು ? ಕೇಂದ್ರ ಮಾರಾಟ ತೆರಿಗೆಯ ಉದ್ದೇಶಗಳು ಮತ್ತು ಲಕ್ಷಣಗಳನ್ನು ವಿವರಿಸಿರಿ.

(a) Write a brief note on benefits of digital signature.

(b) XYZ Co. Ltd. has an estimated total tax liability of ₹ 1,50,000 for the P.Y. 2017-18

(i) What are the due dates for the payment of advance tax ?

(ii) What is the amount of advance tax to be paid on each due date ?

(c) The following are the payments made by PQR Co. Ltd. for the P.Y. 2017-18. Calculate the amount of TDS to be made assuming that all the recipients have valid PAN (except Mr. A) and all are resident Indians.

(i) ₹ 40,000 Paid to Mr. A as the rent per month

(ii) ₹ 2,00,000 paid to statutory auditor as the audit fees for the year

(iii) ₹ 1,20,000 paid as brokerage to XYZ Co. Ltd.

(iv) ₹ 1,00,000 paid to Mr. Ramesh towards execution of an event.

**OR**

What is CST ? Explain the objectives and features of Central Sales Tax.

**- o 0 o -**